# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಸರ್ಕಾರದ ಅಧೀನದಲ್ಲಿರುವ ನಿಗಮ / ಮಂಡಳಿ / ನಿಯಮಿತ /ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು HRMS ನಲ್ಲಿ ಅಳವಡಿಸಿ ವೇತನಗಳನ್ನು ಸೆಳೆಯುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಸುತ್ತೋಲೆ ಸಂ:ಆಇ 24 ಟಿಎಆರ್ 2020, ದಿ:19.08.2020.
2. ಸರ್ಕಾರದ ಸುತ್ತೋಲೆ ಸಂ:ಆಇ 24 ಟಿಎಆರ್ 2020, ದಿ:26.10.2021.
3. ಯೋಜನಾ ನಿರ್ದೇಶಕರು, HRMS-2.0, ಇವರ ಪತ್ರ ಸಂ:FD/HRMSOH-2/ 2/2021, ದಿ:12.11.2021.

*********

**ಪ್ರಸ್ತಾವನೆ;-**

ಮೇಲೆ(1)ರಲ್ಲಿ ಓದಲಾದ ಸುತ್ತೋಲೆಯಲ್ಲಿ ಸರ್ಕಾರದ ಅಧೀನಕ್ಕೆ ಒಳಪಡುವ ನಿಗಮ / ಮಂಡಳಿ/ ನಿಯಮಿತ /ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು HRMS ನಲ್ಲಿ ದಾಖಲಿಸಲು ತಿಳಿಸಲಾಗಿದೆ.

ಮೇಲೆ(2)ರಲ್ಲಿ ಓದಲಾದ ಸುತ್ತೋಲೆಯಲ್ಲಿ ಸರ್ಕಾರದಿಂದ ವೇತನ ಸಹಾಯಾನುದಾನ ಪಡೆಯುವ ಸ್ವಾಯತ್ತ ಸಂಸ್ಥೆಗಳು ಖಜಾನೆ-2 ರಲ್ಲಿ HRMS ಮತ್ತು ಖಜಾನೆ-2 ರ ಏಕೀಕರಣದ ಮೂಲಕ ವೇತನಗಳನ್ನು ಸೆಳೆಯಲು ಖಜಾನೆಯಿಂದ GIA Code ಪಡೆಯುವಂತೆ ಸೂಚಿಸಲಾಗಿದೆ.

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ರಾಜ್ಯ ಸರ್ಕಾರದಿಂದ ಶೇ.85 ರಷ್ಟು ವೇತನ ಸಹಾಯಾನುದಾನವನ್ನು ಹಾಗೂ ವೇತನದ ಶೇ.15 ರಷ್ಟು ಭಾಗವನ್ನು ಸಂಬಂಧಪಟ್ಟ ಇಂಜಿನಿಯರಿಂಗ್ ಕಾಲೇಜುಗಳು ತಮ್ಮ ಸ್ವಂತ ಸಂಪನ್ಮೂಲದಿಂದ ಭರಿಸಲಾಗುತ್ತಿದೆ.

ಯೋಜನಾ ನಿರ್ದೇಶಕರು, HRMS-2.0 ರವರು ಮೇಲೆ(3) ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಎಲ್ಲಾ ನಿಗಮ / ಮಂಡಳಿ/ ನಿಯಮಿತ /ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ಸ್ವಾಯತ್ತ ಸಂಸ್ಥೆಗಳನ್ನು ಸಹ HRMS ವ್ಯಾಪ್ತಿಗೆ ಒಳಪಡಿಸಿದ್ದು, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ನೌಕರರಿಗೆ ಸರ್ಕಾರದ ಪಾಲು ಶೇ.85 ರಷ್ಟು ಮೊತ್ತವನ್ನು HRMS ನಲ್ಲಿ ಶೇ.100 ವೇತನವೆಂದು ಪರಿಗಣಿಸಿ, ಎಲ್ಲಾ ಕಡಿತಗಳು ಅಂದರೆ, ವೃತ್ತಿ ತೆರಿಗೆ, ಜೀವ ವಿಮೆ, ಹಾಗೂ ಆದಾಯ ತೆರಿಗೆ ಇನ್ನಿತರೆಗಳನ್ನು ಕಟಾಯಿಸಿ ಸಂಸ್ಥೆಯ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದ್ದು, ನಿವ್ವಳ ವೇತನವನ್ನು ಸಂಬಂಧಿಸಿದ ನೌಕರರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತಿರುವುದಾಗಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಸಹಾಯಾನುದಾನ (GIA) ಪಡೆಯುವ ಸಂಸ್ಥೆಗಳು ನೌಕರರ ವೇತನವನ್ನು HRMS ನಲ್ಲಿ ಸೆಳೆಯಲು GIA ಬಿಲ್ಲು ತಯಾರಿಸುವಾಗ ಶೇ.85% ರಷ್ಟು ಅನುದಾನವನ್ನು ಬಿಲ್ಲಿನ ಮೊತ್ತವಾಗಿ ಪರಿಗಣಿಸಲು ಹಾಗೂ ಕಾರ್ಯಗತಗೊಳಿಸಲು ಸರ್ಕಾರದಿಂದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 24 ಟಿಎಆರ್ 2020**

**ಬೆಂಗಳೂರು, ದಿನಾಂಕ:24-02-2022.**

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಈ ಕೆಳಕಂಡ ಇಂಜಿನಿಯರಿಂಗ್ ಕಾಲೇಜುಗಳು ರಾಜ್ಯ ಸರ್ಕಾರದಿಂದ ವೇತನಕ್ಕಾಗಿ ಪೂರ್ಣ ಸಹಾಯಾನುದಾನ ಪಡೆಯದೇ, ಶೇಕಡಾವಾರು ಸ್ವಲ್ಪ ಭಾಗವನ್ನು ಸ್ವಂತ ಸಂಪನ್ಮೂಲದಿಂದ ಭರಿಸಿಕೊಳ್ಳುತ್ತಿದ್ದಾರೆ ಹಾಗೂ ಈ ಸಂಸ್ಥೆಗಳಿಗೆ ರಾಜ್ಯ ಸರ್ಕಾರದ ಪಾಲನ್ನು ಮಾತ್ರ ಆಯವ್ಯಯದಲ್ಲಿ ಒದಗಿಸಲಾಗುತ್ತದೆ.

| ಕ್ರಮ ಸಂಖ್ಯೆ | ವಿಶ್ವ ವಿದ್ಯಾಲಯಗಳು ಇಂಜಿನಿಯರಿಂಗ್ ಕಾಲೇಜುಗಳು | ಅನುಪಾತ (ರಾಜ್ಯ ಸರ್ಕಾರ & ಮ್ಯಾನೇಜ್‌ಮೆಂಟ್) |
|---|---|---|
| 1 | ಬಿ.ವಿ. ಭೂಮರೆಡ್ಡಿ ಇಂಜಿನಿಯರಿಂಗ್ & ತಾಂತ್ರಿಕ ಕಾಲೇಜು ಹುಬ್ಬಳ್ಳಿ | 85 : 15 |
| 2 | ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು ಮಂಡ್ಯ | 85 : 15 |
| 3 | ಮಲೆನಾಡು ಕಾಲೇಜು ಇಂಜಿನಿಯರಿಂಗ್ ಕಾಲೇಜು ಹಾಸನ | 85 : 15 |
| 4 | ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜು ಕಲಬುರಗಿ | 85 : 15 |
| 5 | ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಮೈಸೂರು | 85 : 15 |
| 6 | ಡಾ|| ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಬೆಂಗಳೂರು | 85 : 15 |
| 7 | ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು ಬಾಗಲಕೋಟೆ | 85 : 15 |
| 8 | ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು ಬೆಂಗಳೂರು | 85 : 15 |
| 9 | ಬಿ.ಎಂ.ಎಸ್. ಸಂಜೆ ಇಂಜಿನಿಯರಿಂಗ್ ಕಾಲೇಜು ಬೆಂಗಳೂರು | 85 : 15 |
| 10 | ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮೈಸೂರು | 85 : 15 |

ಆದ್ದರಿಂದ HRMS ನಲ್ಲಿ ಈ ಮೇಲ್ಕಂಡ ಇಂಜಿನಿಯರಿಂಗ್ ಕಾಲೇಜುಗಳ ವೇತನ ಸೆಳೆಯಲು GIA ಬಿಲ್ಲು ತಯಾರಿಸುವಾಗ ಶೇ 85 ರಷ್ಟು ಅನುದಾನವನ್ನು ಪೂರ್ಣ ಮೊತ್ತವಾಗಿ ಬಿಲ್ಲಿನಲ್ಲಿ ಪರಿಗಣಿಸಿ ಈ

ಮೊತ್ತದಿಂದ ಎಲ್ಲಾ ಶಾಸನಬದ್ಧ ಕಡಿತಗಳನ್ನು ಅಂದರೆ ವೃತ್ತಿ ತೆರಿಗೆ, ಜೀವವಿಮೆ, NPS, ಆದಾಯ ತೆರಿಗೆ ಮುಂತಾದವುಗಳನ್ನು ಕಟಾಯಿಸಿ ಸಂಸ್ಥೆಯ ಪ್ರಧಾನ ಬ್ಯಾಂಕ್ ಖಾತೆಗೆ ಜಮೆ ಮಾಡುವಂತೆ ನಿವ್ವಳ ಮೊತ್ತವನ್ನು ನೌಕರರ ಬ್ಯಾಂಕ್ ಖಾತೆಗೆ ಜಮೆ ಮಾಡುವಂತೆ ಆದೇಶಿಸಿದೆ. ಸ್ವಂತ ಸಂಪನ್ಮೂಲದಿಂದ ಭರಿಸಲಾಗುವ ವೇತನದ ಭಾಗವನ್ನು ವಿಳಂಬವಿಲ್ಲದಂತೆ ನೌಕರರಿಗೆ ಪಾವತಿಸುವುದು ಹಾಗೂ ಶಾಸನಬದ್ಧ ಕಟಾವಣೆಗಳನ್ನು ನಿಗದಿತ ಅವಧಿಯಲ್ಲಿ ಆಯಾ ಪ್ರಾಧಿಕಾರಗಳಿಗೆ ಜಮಾ ಮಾಡುವುದು ಸಂಬಂಧಪಟ್ಟ ಸ್ವಾಯತ್ತ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ ಎಂದು ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

24/2/2022

**(ಹೆಚ್.ಎ. ಶೋಭ)**
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
7. ಯೋಜನಾ ನಿರ್ದೇಶಕರು, ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ-2, (HRMS-2.0) 5 ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
8. ಆಯುಕ್ತರು, ತಾಂತ್ರಿಕ ಮತ್ತು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
9. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
10. ಉಪ ನಿರ್ದೇಶಕರು, ಟಿಎನ್ಎಂಸಿ ಖನಿಜ ಭವನ, ಬೆಂಗಳೂರು.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.
12. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲ ತಾಣ www.finance.karnataka.gov.in ನಲ್ಲಿ ವೀಕ್ಷಿಸಿ.